144ನೇ ಅಧಿವೇಶನದಲ್ಲಿ ದಿ: 14/9/2021ರಂದು ಸದನದಲ್ಲಿ
ಚರ್ಚೆಯಾಗಿದೆ. ನಿ-72, ಕ್ರ-21

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡ ಮತ್ತು ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರು ನಿಯಮ-72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ ಸಲ್ಲಿಸುವ ಬಗ್ಗೆ

**ವಿಷಯ**

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸರ್ಕಾರಿ ಮೂಕ ಮಕ್ಕಳ ಶಾಲೆಯ ವಿಕಲಚೇತನರ ಶಿಕ್ಷಕರಿಗೆ ದಿನಾಂಕ:17.07.2019ರಲ್ಲಿ ಆರ್ಥಿಕ ಇಲಾಖೆ ಸಹಮತಿ ನೀಡಿರುವ ಪ್ರಕಾರ ಅಪರ ಮುಖ್ಯ ಕಾರ್ಯದರ್ಶಿಗಳು ದಿನಾಂಕ:12.01.2021 ಸಭಾ ನಡವಳಿಯಲ್ಲಿ ಆದೇಶ ಹೊರಡಿಸಿರುತ್ತಾರೆ. ವಿಶೇಷ ವಿಲೀನಾತಿ ನಿಯಮಗಳನ್ನು ರೂಪಿಸಿ, ಹಾಲಿ ಸಿಬ್ಬಂದಿಗಳಿಗೆ ಜೇಷ್ಠತೆಯನ್ನು ನಿಗದಿಗೊಳಿಸಿ, 2 ವಾರಗಳಲ್ಲಿ ಸಂಪುಟ ಸಭೆಯ ಅನುಮೋದನೆ ಪಡೆದು ನಿವೃತ್ತಿ ಶಿಕ್ಷಕರಿಗೆ ಪಿಂಚಣಿ ನೀಡುವುದಾಗಿ ಮಾನ್ಯ ಇಲಾಖಾ ಸಚಿವರು ಭರವಸೆ ಸಂಖ್ಯೆ: ಮಮಮಿ/88/ಪಿಹೆಚ್‌ಪಿ/2021ರಲ್ಲಿ ಭರವಸೆ ನೀಡಿರುತ್ತಾರೆ. ಆದರೆ ಮಾನ್ಯ ಸಚಿವರು ಕಳೆದ 7 ಅಧಿವೇಶನಗಳಿಂದಲೂ ಸದನದಲ್ಲಿ ಭರವಸೆ ನೀಡುತ್ತಿದ್ದು, ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ವಿಳಂಬ ಧೋರಣೆಯಿಂದ ಈವರೆವಿಗೂ ವಿಲೀನಾತಿ ನಿಯಮಗಳನ್ನು ರೂಪಿಸಿ ಜೇಷ್ಠತೆಯನ್ನು ನಿಗದಿಪಡಿಸಿರುವುದಿಲ್ಲ ಮತ್ತು ಆರ್ಥಿಕ ಸಂಕಷ್ಟದಲ್ಲಿರುವ ನಿವೃತ್ತ ಅಂಗವಿಕಲ ಶಿಕ್ಷಕರಿಗೆ ಯಾವಾಗ ಪಿಂಚಣಿ ನೀಡಲಾಗುವುದು ಎಂಬ ಬಗ್ಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಗಮನ ಸೆಳೆಯುತ್ತೇನೆ.

### ಉತ್ತರ

ಬೆಂಗಳೂರಿನಲ್ಲಿರುವ ಹಂಸಧ್ವನಿ ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಯ ನಿವೃತ್ತ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ದೊರಕಿಸಿಕೊಡುವ ಈಗಾಗಲೇ ಕರಡು ಕುರಿತು ಸಚಿವ ಸಂಪುಟ ಟಿಪ್ಪಣಿಯನ್ನು ತಯಾರಿಸಿದ್ದು, ಸಚಿವ ಸಂಪುಟದ ಮುಂದೆ ಮಂಡಿಸುವ ಮೊದಲು ಆರ್ಥಿಕ ಇಲಾಖೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕಾನೂನು ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಭಿಪ್ರಾಯಗಳನ್ನು ಪಡೆಯಲು ಪ್ರತ್ಯೇಕ ಕಡತಗಳಲ್ಲಿ ಕಳುಹಿಸಲಾಗಿ, ಸದರಿ ಇಲಾಖೆಗಳ ಅಭಿಪ್ರಾಯದೊಂದಿಗೆ ಸಚಿವ ಸಂಪುಟದ ಅನುಮೋದನೆ ಪಡೆದು ಹಂಸಧ್ವನಿ ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಯ ನಿವೃತ್ತ ಶಿಕ್ಷಕರಿಗೆ ಪಿಂಚಣಿ ಸೌಲಭ್ಯವನ್ನು ಒದಗಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.

(ಮಮಇ 183 ಪಿಹೆಚ್‌ಪಿ 2021)

Halappa Bst

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.